**ಪಾಠ-3** **ಅಕ್ಟೋಬರ್ 10-16**

# ಶಿಕ್ಷಕನಾದ ಧರ್ಮಶಾಸ್ತ್ರ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಧ.ಕಾ. 6:5, 31:9-27; ರೋಮ 3:19-23; ಪ್ರಕ 12:17; 14:12; ಮಾರ್ಕ 6:25-27; ಇಬ್ರಿ 5:8.

**ಸ್ಮರಣವಾಕ್ಯ: "ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು"** (ಧ.ಕಾ. 6:5).

ಗಲಾತ್ಯದವರಿಗೆ ಕರ್ಮಮಾರ್ಗಕ್ಕೆ ವಿರುದ್ಧವಾಗಿ ಎಚ್ಚರಿಸುತ್ತಾ, ಪೌಲನು ಹೀಗೆ ಬರೆದಿದ್ದಾನೆ: **"ಬದುಕಿಸುವುದಕ್ಕೆ ಶಕ್ತವಾಗಿರುವ ಧರ್ಮಶಾಸ್ತ್ರವು ಕೊಡಲ್ಪಟ್ಟಿದ್ದರೆ ಸಂದೇಹವಿಲ್ಲದೆ ಕರ್ಮಮಾರ್ಗದಿಂದಲೇ ನೀತಿಯುಂಟಾಗುತ್ತಿತ್ತು"** (ಗಲಾತ್ಯ 3:21). ಯಾವುದಾದರು ಕಾನೂನು/ ನಿಯಮ "ಬದುಕಿಸುವುದಕ್ಕೆ ಶಕ್ತವಾಗಿದ್ದರೆ" ಅದು ದೇವರ ಕಾನೂನು/ ನಿಯಮವೇ ಆಗಿರಬೇಕು. ಆದರೆ, ಪೌಲನ ವಾದವೇನೆಂದರೆ: ದೇವರ ಧರ್ಮಶಾಸ್ತ್ರ ಸಹ ಪಾಪಿಗಳಾದ ನಮ್ಮನ್ನು ಬದುಕಿಸಲಾರದು ಎಂಬುದೇ. ಏಕೆ? ಈ ಪ್ರಶ್ನೆಗೆ ಪೌಲನ ಉತ್ತರ: **"ಹಾಗಾದರೆ ಯೇಸುಕ್ರಿಸ್ತನಲ್ಲಿ ನಂಬಿಕೆ ಯಿಡುವುದರಿಂದ ಉಂಟಾಗುವ ಆ ವಾಗ್ದಾನದ ಫಲವು ನಂಬುವವರಿಗೇ ಕೊಡಲ್ಪಡ**

---

* ಅಕ್ಟೋಬರ್ 17ರ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.

**ಬೇಕೆಂದು ಶಾಸ್ತ್ರವು ಸಮಸ್ತವನ್ನು ಪಾಪಕ್ಕೊಳಗಾಗಿದೆಯೆಂದು ತೀರ್ಮಾನಿಸಿತು"** (ಗಲಾತ್ಯ 3:22).

ಧರ್ಮಶಾಸ್ತ್ರ ಪಾಪಿಗಳಿಗೆ ಜೀವಕೊಡಲಶಕ್ತವಾದರೆ, ಅದರ ಉದ್ದೇಶವಾದರೇನು? ನಮಗೆ ಕೃಪೆಯು ಅವಶ್ಯವಿದೆ ಎಂಬುದನ್ನು ತೋರಿಸುವದಷ್ಟೇ ಅಲ್ಲವೇ? ಹಾಗಾದರೆ ಧರ್ಮಶಾಸ್ತ್ರದ ನಡೆ ಬರೀ ಋಣಾತ್ಮಕವೇ? ನಮ್ಮ ಪಾಪಗಳನ್ನು ಎತ್ತಿ ತೋರಿಸುವುದಷ್ಟೇ ಅದರ ಕೆಲಸವೇ?

ಇಲ್ಲ; ಧರ್ಮಶಾಸ್ತ್ರವು, ಕ್ರಿಸ್ತನೊಬ್ಬನಿಂದಲೇ ಪ್ರಾಪ್ತವಾಗುವ ಜೀವನದೆಡೆಗೆ ಬೆರಳು ತೋರಿಸುತ್ತದೆ. ನಿಜವಾದ ಶಿಕ್ಷಣವು ಸಹ ಇದನ್ನೇ ಹೇಳಬೇಕು. ಅಂದರೆ: ಕೃಪೆ, ನಂಬಿಕೆ ಮತ್ತು ಕ್ರಿಸ್ತನಿಗೆ ವಿಧೇಯತೆ ತೋರುವ ಜೀವನದೆಡೆಗೆ ಬೆರಳು ತೋರುವಂತಿರಬೇಕು. ಆದ್ದರಿಂದಲೇ, ಕ್ರೈಸ್ತೀಯ ಶಿಕ್ಷಣದಲ್ಲಿ ದೇವರ ಧರ್ಮಶಾಸ್ತ್ರದ ಪಾತ್ರವೇನು ಎಂಬುದನ್ನು ಈ ವಾರ ಅಧ್ಯಯನ ಮಾಡೋಣ. ಹಾಗೆ ಅಧ್ಯಯನ ಮಾಡುವಾಗ, ಧರ್ಮಶಾಸ್ತ್ರ ನಮ್ಮನ್ನು ಕಾಪಾಡುತ್ತಿದ್ದರೂ, ಅದು ನಮಗೆ ನಂಬಿಕೆ, ಕೃಪೆ ಮತ್ತು ಅಧಃಪತನಗೊಂಡ ಮಾನವರ ಮೇಲೆ ಆತನು ತೋರುವ ಪ್ರೀತಿಯನ್ನು ಕುರಿತು ಮಾತನಾಡುತ್ತದೆ.

**ಭಾನುವಾರ** **ಅಕ್ಟೋಬರ್ 11**

## ದೇವರನ್ನು ಪ್ರೀತಿಸುವುದು ಮತ್ತು ಹೆದರುವುದು

ವಾಗ್ದತ್ತ ದೇಶಕ್ಕೆ ಹೊಸ ಸಂತತಿಯೊಂದು ಪ್ರವೇಶ ಮಾಡುವ ಮುನ್ನ, ಇಸ್ರಾಯೇಲ್ಯರಿಗೆ, ಮೋಶೆ ಹೇಳಿದ ಅಂತಿಮ ಮಾತುಗಳು ಧರ್ಮೋಪದೇಶ ಕಾಂಡದಲ್ಲಿ ಬರೆಯಲ್ಪಟ್ಟಿವೆ. ಅವರು ಹಾಗೆ ಮಾಡುವ ಮುನ್ನ ಅವರಿಗೆ ಸ್ಪಷ್ಟವಾಗಿ ಹೇಳಬೇಕಾದ ಕೆಲವು ಮಾತುಗಳು ಮತ್ತು ಉಪದೇಶಗಳು ಅವನಲ್ಲಿದ್ದವು.

**ಧರ್ಮೋಪದೇಶಕಾಂಡ 31:9–13ನ್ನು ಓದಿಕೊಳ್ಳಿರಿ. ದೇವರಿಗೆ ಭಯಪಡಿರಿ ಎಂಬುದರ ಅರ್ಥವೇನು?**

___

___

ದೇವರು ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು ಉದ್ದೇಶಪೂರ್ವಕವಾಗಿಯೇ ಕೊಟ್ಟನು. ಆ ಧರ್ಮಶಾಸ್ತ್ರವನ್ನು ಅವರು ಮರೆಯದಿರಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದನು. ಇದೆಲ್ಲವನ್ನು ನೋಡಿದರೆ ದೇವರು ಒಬ್ಬ ದೀರ್ಘ ಶಾಂತಿಯುಳ್ಳ ಶಿಕ್ಷಣ ತಜ್ಞನಾಗಿದ್ದನೆಂಬುದರಲ್ಲಿ ಸಂದೇಹವೇ ಇಲ್ಲ. ಆತ ಬೋಧನೆ ಮಾಡುತ್ತಾನೆ; ಅದನ್ನು ಪುನಃ ಪುನಃ ಪುನರಾವರ್ತನೆ ಮಾಡುತ್ತಾನೆ; ಪ್ರವಾದಿಗಳನ್ನು ಕಳುಹಿಸುತ್ತಾನೆ; ಮತ್ತು ತನ್ನ ಸೇವಕರುಗಳ ಮೂಲಕ ತನ್ನ ಸಂದೇಶವನ್ನು ಜನರಿಗೆ ತಲುಪಿಸುತ್ತಲೇ ಬಂದಿದ್ದಾನೆ. ಈ ಕೆಲಸಗಳನ್ನು ಮತ್ತೆ ಮತ್ತೆ ಮಾಡಿದ್ದಾನೆ. ದೇವರು ತನ್ನ ಜನರಿಗೆ ಬದುಕುವ ದಾರಿಯನ್ನು ಅನುಸರಿಸಿರಿ ಎಂದು ಬೋಧಿಸುತ್ತಲೇ ಬಂದದ್ದು ತಾನೇ ಹಳೇ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ?

ಭವಿಷ್ಯ ಕಾಲದಲ್ಲಿ ಬರಲಿರುವ ಸಂತತಿಗಳು, ಧರ್ಮಶಾಸ್ತ್ರ ಕಲಿಯುವುದರ ಪ್ರಾಮುಖ್ಯತೆಯನ್ನು, ಮೋಶೆ ಒತ್ತಿ ಹೇಳಿರುವುದನ್ನು, ಈ ವಾಕ್ಯಗಳಲ್ಲಿ ನಾವು ಗಮನಿಸಬಹುದು. ಇದನ್ನು ಮೋಶೆ ಎರಡು ಹಂತಗಳ ಪ್ರಕ್ರಿಯೆ ಎಂದು ವರ್ಣಿಸಿದ್ದಾನೆ. ಮೊದಲನೆಯದಾಗಿ ಚಿಕ್ಕಮಕ್ಕಳು ಧರ್ಮಶಾಸ್ತ್ರವನ್ನು ಕೇಳಿಸಿಕೊಳ್ಳುತ್ತಾರೆ. ಆನಂತರದಲ್ಲಿ "ಅವರು ತಮ್ಮ ದೇವರಾದ ಯೆಹೋವನಲ್ಲಿ ಭಯಭಕ್ತಿಯುಳ್ಳವರಾಗಿರುವುದಕ್ಕೆ ಕಲಿತುಕೊಳ್ಳುವರು" (ಧ.ಕಾ. 31:13).

ಮೊದಲು, ಅವರು ಆಲಿಸುವರು. ಆ ನಂತರದಲ್ಲಿ ದೇವರಿಗೆ ಭಯಪಡುವುದನ್ನು ಕಲಿಯುವರು. ಧರ್ಮಶಾಸ್ತ್ರವನ್ನು ಕಲಿತುಕೊಂಡಷ್ಟಕ್ಕೆ, ಅದನ್ನು ಅರಿತುಕೊಂಡದ್ದರಿಂದ ಸಹಜವಾಗಿಯೇ ಭಯ ಹುಟ್ಟಿಕೊಳ್ಳುತ್ತದೆ ಎಂದು ಮೊದಲೇ ಭಾವಿಸದಿರೋಣ. ದೇವರ ಭಯ ಯಾವ ರೀತಿಯಲ್ಲಿ ಹುಟ್ಟಿ ಬರುತ್ತದೆ ಎಂಬುದನ್ನು ಅಧ್ಯಯನ ಮಾಡಬೇಕು. ಮೋಶೆಯು, ಜ್ಞಾನ ಮತ್ತು ಹೆದರಿಕೆ ಪ್ರಕ್ರಿಯೆಗಳೇ ಹೊರತು, ಅದು ಇದ್ದಕ್ಕಿದ್ದಂತೆ ಉದ್ಭವವಾಗುವ ಕಾರಣ ಮತ್ತು ಪರಿಣಾಮದ ಸಂಬಂಧವಂತೂ ಅಲ್ಲ ಎಂದಿದ್ದಾನೆ. ಜನರಿಗೆ– **"ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು"** ಎಂದು ಹೇಳಿದ ಮೇಲೆ "ದೇವರಿಗೆ ಭಯಪಡಿರಿ" ಎಂಬ ಮಾತಿನ ಅರ್ಥವೇನು? (ಧ.ಕಾ. 6:5).

ಒಂದು ಮಗು ತನ್ನ ಒಳ್ಳೇ ತಂದೆಯನ್ನು ಪ್ರೀತಿಸುತ್ತದೆ ಮತ್ತು ಅದೇ ಸಮಯದಲ್ಲಿ ಅವನನ್ನು ಕಂಡರೆ ಭಯವೂ ಪಡುತ್ತದೆ, ಬಹುಶಃ ಇದನ್ನು ಮೇಲಿನ ಸಂದರ್ಭಕ್ಕೂ ಅನ್ವಯಿಸಬಹುದು. ಆ ತಂದೆ, ತಾನು, ಆ ಮಗುವನ್ನು ಪ್ರೀತಿಸುವುದನ್ನು ಮತ್ತು ಕಾಳಜಿ ವಹಿಸುವುದನ್ನು ಹೇಗೆ ತೋರಿಸುತ್ತಾನೆಂದರೆ: ತಾನು ಏನಂದುಕೊಳ್ಳುತ್ತಾನೋ ಅದನ್ನೇ ಹೇಳುತ್ತಾನೆ ಮತ್ತು ಏನು ಹೇಳುತ್ತಾನೋ ಅದನ್ನೇ ಅಂದುಕೊಳ್ಳುತ್ತಾನೆ. ಇಂತಹ ತಂದೆಯ ಹತ್ತಿರ ಏನಾದರೂ ತಪ್ಪು ಮಾಡಿ ಸಿಕ್ಕಿಹಾಕಿಕೊಂಡರೆ, ಆ ತಪ್ಪಿಗೆ ಸಿಗಬೇಕಾದ ಶಿಕ್ಷೆ ಆಗಿಯೇ ಆಗುವುದು. ಹೌದು, ನಾವು ಪ್ರೀತಿಸಬೇಕು ಮತ್ತು ಅದೇ ಸಮಯದಲ್ಲಿ ದೇವರಿಗೆ ಭಯ ಪಡಲೂ ಬೇಕು. ಅವುಗಳೇನು ವಿರೋಧಾತ್ಮಕ ಆಲೋಚನೆಗಳೆನಲ್ಲ. ಎಷ್ಟು ಹೆಚ್ಚಾಗಿ ನಾವು ದೇವರನ್ನು ಕುರಿತು ಅಧ್ಯಯನ ಮಾಡುತ್ತೇವೋ, ಆತನ ಒಳ್ಳೇಯತನವನ್ನು ಅರಿತುಕೊಂಡ ನಾವು ಅಷ್ಟೇ ಹೆಚ್ಚಾಗಿ ಪ್ರೀತಿಸಲೂ ತೊಡಗುತ್ತೇವೆ. ಅದೇ ಸಂದರ್ಭದಲ್ಲಿ, ನಾವು ಆತನನ್ನು ಅದೆಷ್ಟು ಹೆಚ್ಚಾಗಿ ಅರಿತುಕೊಳ್ಳುತ್ತೇವೋ, ಅಷ್ಟೇ ಆತನಲ್ಲಿ ಭಯವೂ ಉಂಟಾಗುತ್ತದೆ. ಆತ ಅದೆಷ್ಟು ಪರಿಶುದ್ಧನೂ ಮತ್ತು ನೀತಿವಂತನೂ ಆದ ದೇವರಾಗಿದ್ದಾನೆ, ಆದರೆ ನಾವು ಅಷ್ಟೇ ಅಶುದ್ಧರು ಮತ್ತು ಅನೀತಿವಂತರು ಆಗಿರುವುದರಿಂದ ಆ ಭಯ ನಮ್ಮೆಲ್ಲುಂಟಾಗಬಹುದು. ಆದರೆ ಆತನ ಕೃಪೆ ನಮ್ಮ ಮೇಲೆ ಬಹಳವಾಗಿರುವುದರಿಂದ ನಾವು ಆತನ ಕೃಪೆಗೆ ಅರ್ಹರಲ್ಲದಿದ್ದರೂ, ಆತ ನಮ್ಮನ್ನು ಪ್ರೀತಿಸುತ್ತಾನೆ. ಹೀಗಾಗಿ ನಾವು ನಾಶವಾಗದೆ ಬದುಕುಳಿದಿದ್ದೇವೆ.

**ಒಂದೇ ಸಂದರ್ಭದಲ್ಲಿ, ದೇವರನ್ನು ಪ್ರೀತಿಮಾಡುವುದು ಮತ್ತು ಆತನಿಗೆ ಭಯಪಡುವುದನ್ನು ನಾವು ಹೇಗೆ ಅರ್ಥಮಾಡಿಕೊಳ್ಳುವುದು?**

**ಸೋಮವಾರ** **ಅಕ್ಟೋಬರ್ 12**

## ನಿಮಗೆ ವಿರುದ್ಧವಾದ ಸಾಕ್ಷಿ

ಇನ್ನೇನು ಸಾಯುತ್ತೇನೆ ಎಂದು ಮೋಶೆಗೆ ಅನಿಸಿದಾಗ, ತಾನು ಯಾವ ಸನ್ನಿವೇಶವನ್ನು ಬಿಟ್ಟುಹೋಗುತ್ತಿದ್ದೇನೆ ಎಂಬುದರ ಗಾಢ ಚಿಂತನೆ ಅವನ ಬೆನ್ನಹತ್ತಿತ್ತು. ತನ್ನ ಸಾವಿನ ನಂತರ, ಇಸ್ರಾಯೇಲ್ಯರು, ವಾಗ್ದತ್ತ ದೇಶವಾದ ಕಾನಾನ್‌ನ್ನು ಪ್ರವೇಶಿಸಲಿದ್ದಾರೆ ಎಂದು ಆತನಿಗೆ ಗೊತ್ತಿತ್ತು. ಅವರು ಬಹು

ಕಾಲದಿಂದ, ಅಷ್ಟೇ ಕಾತರದಿಂದ ಕಾಯುತ್ತಿದ್ದ ವಾಗ್ದಾತ್ತ ದೇಶವನ್ನು ಸೇರಿದ ಮೇಲೆ, ಅವರು ದೇವರಿಗೇ ತಿರುಗಿಬೀಳುವರೆಂದು ಅವನಿಗೆ ಗೊತ್ತಿತ್ತು.

**ಧ.ಕಾ. 31:14–27ನ್ನು ಓದಿಕೊಳ್ಳಿರಿ. ಮೋಶೆ, ತಾನು ಸಾಯುವ ಮುನ್ನ ಮಾಡುವ ಸಿದ್ಧತೆಗಳೇನು? ಮೊಶೆಯ ಮುಖ್ಯವಾದ ಕಾಳಜಿಗಳು ಯಾವುವು ಮತ್ತು ಅವನು ಅವುಗಳನ್ನು ಹೇಗೆ ಸಂಭಾಳಿಸುತ್ತಾನೆ?**

---

---

ಶಿಕ್ಷಕನೊಬ್ಬ, ತಾನು ಸ್ವಲ್ಪಕಾಲ ಶಾಲೆಗೆ ಬಾರದಿದ್ದರೆ, ತನ್ನ ತರಗತಿಯನ್ನು ನೋಡಿಕೊಳ್ಳಲು ಸಬ್‌ಸ್ಟಿಟ್ಯೂಟ್ (ಬದಲಿ ಶಿಕ್ಷಕ) ಒಬ್ಬನಿಗೆ ತರಬೇತಿ ಕೊಡುವ ರೀತಿಯಲ್ಲಿ ಮೋಶೆ ಈಗ ನಡೆದುಕೊಳ್ಳಲಾರಂಭಿಸಿದ್ದ. ತರಗತಿಯಲ್ಲಿ ಅವನ ಸಮ್ಮುಖದಲ್ಲಿಯೇ ಕೆಲವು ವಿದ್ಯಾರ್ಥಿಗಳು ತುಂಟತನ ಮಾಡುತ್ತಿದ್ದದುಂಟು. ಅವನ ಅನುಪಸ್ಥಿತಿಯಲ್ಲಿ ಅವರೆಲ್ಲ ಒಳ್ಳೆಯ ವಿದ್ಯಾರ್ಥಿಗಳಾಗಿ ಬಿಡುತ್ತಾರೆ. ತುಂಟತನ ಮಾಡುವುದಿಲ್ಲವೆಂದು ಯೋಚಿಸಿ, ತನ್ನನ್ನು ಮೋಸಗೊಳಿಸಿಕೊಳ್ಳಲು ಆತ ಸಿದ್ಧನಿರಲಿಲ್ಲ. ಮಂಜೂಷ ಪೆಟ್ಟಿಗೆಯನ್ನು ಹೊರುತ್ತಿದ್ದ ಲೇವಿಯರಿಗೆ ಮಂಜೂಷದ ಪೆಟ್ಟಿಗೆಯ ಬಳಿಯಲ್ಲಿ, ಅವರಿಗೆ ಸಾಕ್ಷಿಯೋಪಾದಿಯಲ್ಲಿರುವಂತೆ, ಧರ್ಮಶಾಸ್ತ್ರವನ್ನಿಡಬೇಕೆಂದು ಆದೇಶಿಸುತ್ತಾನೆ. ಮೋಶೆ, ಬದಲಿ ಶಿಕ್ಷಕನಿಗೆ ತನ್ನ ಪಾಠಯೋಜನೆ ಒಪ್ಪಿಸುವ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ. ಆದರೆ ಒಂದು ಸಾಕ್ಷಿಯನ್ನೇ ಕೈ ಬದಲಾಯಿಸುತ್ತಿದ್ದಾನೆ. ಧರ್ಮಶಾಸ್ತ್ರ, ಮಾನವರ ಹೃದಯಗಳನ್ನು ದೂಷಿಸುವ ಶಕ್ತಿಯುಳ್ಳ ಜೀವಂತ ಜೀವಿಯೋ ಎಂಬ ರೀತಿಯಲ್ಲಿ ಮೋಶೆ ಅದನ್ನು ಕುರಿತು ಮಾತಾಡಿದ್ದಾನೆ.

**ಧರ್ಮಶಾಸ್ತ್ರ, ಅವರ "ವಿರುದ್ಧ ಸಾಕ್ಷಿ" ಕೊಡುವಂಥದ್ದು ಎಂದು ಚಿಂತನೆ ಮಾಡಿನೋಡಿರಿ. ಹೊಸ ಒಡಂಬಡಿಕೆಯ ವಿಷಯದಲ್ಲೂ ಈ ಆಲೋಚನೆ ಬಂದರೆ ಅದನ್ನು ನಾವು ಅರ್ಥ ಮಾಡಿಕೊಳ್ಳುವುದು ಹೇಗೆ? ರೋಮ 3:19–23ನ್ನು ಓದಿಕೊಳ್ಳಿರಿ. ನಮಗೆ ಕೃಪೆಯ ಅವಕಾಶವಿದೆಯೆಂದು ಧರ್ಮಶಾಸ್ತ್ರ ಆ ಕಡೆ ಬೆರಳು ತೋರಿಸುವುದು ಹೇಗೆ?**

ಧರ್ಮೋಪದೇಶಕಾಂಡ 31ರಲ್ಲಿ ದೇವರು ಮೋಶೆಗೆ ಕಲಿಸಿದ ಹಾಡನ್ನು ಅವನು ಅಲ್ಲಿ ಬರೆಯುವಂತೆ ಸೂಚಿಸುತ್ತಾನೆ. ನಂತರದಲ್ಲಿ ಈ ಹಾಡನ್ನು ಮೋಶೆ, ಇಸ್ರಾಯೇಲ್ಯರಿಗೆ ಕಲಿಸಿಯೂ ಕೊಡಬೇಕಾಗಿತ್ತು. ವಚನ 19ರಲ್ಲಿ– **"ಈ ಪದ್ಯವು ಇಸ್ರಾಯೇಲ್ಯರಿಗೆ ವಿರೋಧವಾಗಿ ನನ್ನ ಪಕ್ಷದಲ್ಲಿ ಸಾಕ್ಷಿಯಾಗಿರುವಂತೆ ಇದನ್ನು ಅವರಿಗೆ ಬಾಯಿ ಪಾಠಮಾಡಿಸು"** ಎಂದು ಹೇಳಿದ್ದಾನೆ. ಯಾವುದೇ ಒಂದು ಪದ್ಯವನ್ನು ರಾಗಮಯವಾಗಿ ಹಾಡಿಬಿಟ್ಟರೆ, ಅದು ಬಹಳ ಸುಲಭವಾಗಿ ಬಾಯಿಂದ ಬಾಯಿಗೆ ಹರಡುತ್ತಾ ಹೋಗಿಬಿಡುತ್ತದೆ ಮತ್ತು ಅದೇ ಸಮಯದಲ್ಲಿ ಒಂದು ಹಾಡು ಸಾಕ್ಷಿಯಾಗಿಬಿಟ್ಟರೆ, ಅದು ಜನ ತಮ್ಮನ್ನು ತಾವು ಯಾರು ಎಂದು ವಿಮರ್ಶಿಸಿಕೊಳ್ಳುವಂತೆ ಮಾಡುವ ಸಾಮರ್ಥ್ಯವನ್ನು ಪಡೆದುಕೊಂಡು ಬಿಡುತ್ತದೆ. ನಮ್ಮ ಬಗ್ಗೆ ಈ ಪದ್ಯ ಹೇಳುವುದೇನು ಎಂಬ ಕುತೂಹಲವೂ ಅವರಲ್ಲಿ ಬೆಳೆದುಬಂದು ಬಿಡುತ್ತದೆ.

**ದೇವರು ಕೊಟ್ಟಿರುವ ಶಕ್ತಿಯನ್ನೆಲ್ಲಾ ಉಪಯೋಗಿಸಿಕೊಂಡು, ದೇವರ ಧರ್ಮಶಾಸ್ತ್ರಕ್ಕೆ ವಿಧೇಯರಾಗಿ ನಡೆಯಬೇಕೆಂದುಕೊಂಡರೂ, ಯಾವ ರೀತಿಯಲ್ಲಿ ಧರ್ಮಶಾಸ್ತ್ರ "ವಿರುದ್ಧವಾದ ಸಾಕ್ಷಿ" ಎಂಬಂತೆ ಕೆಲಸ ಮಾಡುತ್ತದೆ? ನಮ್ಮ ಜೀವನಕ್ಕೆ ಸುವಾರ್ತೆಯ ಅವಶ್ಯವಿದೆ ಎಂಬುದನ್ನು ಈ ಸಾಕ್ಷಿ ನಮಗೆ ಹೇಗೆ ಕಲಿಸಿಕೊಡುವುದು?**

**ಮಂಗಳವಾರ ಅಕ್ಟೋಬರ್ 13**

## ನಿನ್ನ ಏಳಿಗೆಯಾಗಲಿ

ಸತ್ಯವೇದದುದ್ದಕ್ಕೂ ಧರ್ಮಶಾಸ್ತ್ರವನ್ನು ಅರಿಯುವುದು ಮತ್ತು ಅದಕ್ಕೆ ವಿಧೇಯರಾಗಿ ನಡೆದುಕೊಳ್ಳುವುದರ ಫಲಿತಾಂಶವೇನು ಎಂಬುದನ್ನು ಕೇಳಿ ತಿಳಿದುಕೊಂಡಿದ್ದೇವೆ.

**ಯೆಹೋಶುವ 1:7,8ನ್ನು ಓದಿಕೊಳ್ಳಿ. ಇಲ್ಲಿ ದೇವರು ಯೆಹೋಶುವನಿಗೆ ಹೇಳುವುದೇನು? ಇಲ್ಲಿನ ತತ್ವಗಳು ಇಂದು ನಮಗೆ ಅನ್ವಯವಾಗುವುದು ಹೇಗೆ?**

---

---

ಕಾನಾನ್‌ಗೆ ಕಾಲಿಡುತ್ತಿದ್ದಂತೆಯೇ, ದೇವರು ಯೆಹೋಶುವನಿಗೆ– **"ನನ್ನ ಸೇವಕನಾದ ಮೋಶೆ ನಿನಗೆ ಬೋಧಿಸಿದ ಧರ್ಮೋಪದೇಶವನ್ನೆಲ್ಲಾ ಕೈಕೊಂಡು ನಡೆಯುವುದರಲ್ಲಿ ಸ್ಥಿರಚಿತ್ತನಾಗಿರು, ಪೂರ್ಣಧೈರ್ಯದಿಂದಿರು. ಎಡಕ್ಕಾದರೂ ಬಲಕ್ಕಾದರೂ ಹೋಗಬೇಡ. ಆಗ ನೀನು ಎಲ್ಲಿ ಹೋದರೂ, ಕೃತಾರ್ಥನಾಗುವಿ"** (ಯೆಹೋ 1:7) ಎಂದು ಹೇಳಿದ್ದನು.

ಇಂದಿನ ನಮ್ಮ ಪ್ರಪಂಚದಲ್ಲಿ ಯಶಸ್ಸನ್ನು ಅಳೆಯುವ ರೀತಿಗಿಂತ ಭಿನ್ನವಾಗಿ ಅಂದು ಯಶಸ್ಸನ್ನು ವಿಧೇಯತೆಯ ಇಂದು ಉಪಭಾಗವಾಗಿ ಅಳೆಯುವ ತತ್ವ ಜಾರಿಯಲ್ಲಿತ್ತು. ಹೊಸ ಹೊಸ ಅನ್ವೇಷಣೆ, ಸೃಜನಾತ್ಮಕತೆ, ಮತ್ತು ಸ್ವಾವಲಂಬನೆ ಯಶಸ್ಸಿನ ಗುರುತುಗಳೆಂದು ಅನೇಕರು ಇಂದು ನಂಬುತ್ತಾರೆ. ಯಾವುದೇ ಒಂದು ಕೈಗಾರಿಕೆಯಲ್ಲಿ ಯಶಸ್ಸು ಸಾಧಿಸಬೇಕಾದರೆ, ಅಸಾಮಾನ್ಯ ಪ್ರತಿಭೆ ಮತ್ತು ಗಂಡಾಂತರಗಳನ್ನು ಎದುರಿಸಬೇಕಾದ ಧೈರ್ಯ ಹಾಗು ಸ್ಥೈರ್ಯ ಬೇಕಾಗಿದೆ.

ಅದು ಏನೇ ಇರಲಿ, ದೇವರ ದೃಷ್ಟಿಯಲ್ಲಿ ಯಶಸ್ಸಿಗೆ ಬೇಕಾಗಿರುವುದು ಒಂದು ವಿಭಿನ್ನ ಸಂಪನ್ಮೂಲಗಳ ಗಣ.

**ಓದಿಕೊಳ್ಳಿ: ಪ್ರಕಟನೆ 12:17; 14:12; ರೋಮ 1:5; 16:26; ಯಾಕೋ 2:10–12; ಇಂದು ದೇವರ ಆಜ್ಞೆಗಳಿಗೆ ವಿಧೇಯರಾಗಿ ನಡೆದುಕೊಳ್ಳಬೇಕಾದ ವಿಷಯದಲ್ಲಿ ಈ ವಾಕ್ಯಗಳು ಹೇಳುವುದೇನು? ದೇವರಾಜ್ಞೆಗಳಿಗೆ ವಿಧೇಯರಾಗಿ ನಡೆದುಕೊಂಡರೂ ನಾವು ರಕ್ಷಣೆ ಪಡೆಯಲಾಗದಿದ್ದರೂ, ನಾವು ಆಜ್ಞೆಗಳನ್ನು ಕೈಗೊಳ್ಳಬೇಕಾದ್ದು ಮುಖ್ಯವೇಕೆ?**

---

ಹಳೆಯ ಒಡಂಬಡಿಕೆ, ಹೊಸ ಒಡಂಬಡಿಕೆ, ಹಳೆಯ ಒಪ್ಪಂದ ಮತ್ತು ಹೊಸ ಒಪ್ಪಂದ – ಇವುಗಳ ವಿಷಯ ಬಿಡಿ ಈಗ. ಸತ್ಯವೇದ ನಂಬುವ

ಕ್ರೈಸ್ತರಾದ ನಮಗೆ ದೇವರಾಜ್ಞೆಗಳಿಗೆ ವಿಧೇಯರಾಗಲು ಕರೆಕೊಡಲಾಗಿದೆ. ದೇವರಾಜ್ಞೆಯ ಉಲ್ಲಂಘನೆಯೇ ಪಾಪ. ಅಂತಹ ಪಾಪ, ನೋವು ಮತ್ತು ಸಂಕಷ್ಟ ಹಾಗು ನಿತ್ಯನಾಶಕ್ಕೆ ನಮ್ಮನ್ನು ಕರೆದೊಯ್ಯುತ್ತವೆ. ಪಾಪದ ಫಲಿತಾಂಶ ಮತ್ತು ದೇವರಾಜ್ಞೆಯ ಉಲ್ಲಂಘನೆಯ ಫಲಿತಾಂಶಗಳೇನೆಂದು ಕಲಿಯದವರಾರು ಅಥವಾ ನೋಡದವರಾರು? ಪುರಾತನ ಇಸ್ರಾಯೇಲ್ಯರ ಕಾಲದಲ್ಲಿ ದೇವರಾಜ್ಞೆಯನ್ನು ಕೈಗೊಂಡು ಹೇಗೆ ಅವರು ಅಭಿವೃದ್ಧಿ ಪಥದಲ್ಲಿರುತ್ತಿದ್ದರೋ, (ಅವರಿಗೂ ದೇವರು ಕೃಪೆಯ ಅವಶ್ಯವಿತ್ತು) ಆ ಪರಿಸ್ಥಿತಿ ಇಂದಿಗೂ ಬದಲಾಗಿಲ್ಲ, ಆ ನಿಯಮ ಇಂದೂ ಸಹ ನಮಗೂ ಅನ್ವಯವಾಗುತ್ತದೆ. ದೇವರಾಜ್ಞೆ ಕ್ರೈಸ್ತೀಯ ಶಿಕ್ಷಣದ ಒಂದು ಭಾಗವಾಗಿದೆ. ದೇವರ ಕೃಪೆಯಲ್ಲಿ ಭರವಸೆಯಿಡುವುದು ಮತ್ತು ನಂಬಿಕೆಯಿಂದ ಬದುಕುವರರ ಕೇಂದ್ರ ಬಿಂದುವಾದ ದೇವರಾಜ್ಞೆಯನ್ನು ನಾವು ಕೈಗೊಳ್ಳಲೇಬೇಕು.

**ಪಾಪದ ದುಷ್ಪರಿಣಾಮಗಳ ವಿಷಯದಲ್ಲಿ ನಿಮ್ಮ ಸ್ವಂತ ಅನುಭವಗಳೇನು? ಇತರರು ಅಂತಹದೇ ಪಾಪಗಳನ್ನು ಮಾಡದಿರಲು, ಅವರೊಂದಿಗೆ ಹಂಚಿಕೊಳ್ಳಲು ನೀವು ಕಲಿತ ಪಾಠಗಳೇನು?**

**ಬುಧವಾರ** **ಅಕ್ಟೋಬರ್ 14**

## ದೇವರಾಜ್ಞೆ ಕೈಗೊಳ್ಳುವವರ ಶ್ರಮಗಳು ಮತ್ತು ಹೋರಾಟಗಳು

ದೇವರಿಂದ ಏಳಿಗೆಗೆ ಬಂದ ಜನರ ಸಾಕ್ಷಿಯ ಆಧಾರದ ಮೇಲೆ ಹೇಳುವುದಾದರೆ, ದೇವರಾಜ್ಞೆಗಳನ್ನು ಕೈಗೊಳ್ಳುವವರಿಗೆ ಬಹು ದೊಡ್ಡ ಪ್ರಯೋಜನಗಳುಂಟು. ಯೆಹೋಶುವನು ದೇವರ ಆಜೆಗಳನ್ನು ಬಹಳ ಕಟ್ಟುನಿಟ್ಟಿನಿಂದ ಕೈಗೊಂಡನು ಮತ್ತು ಇಸ್ರಾಯೇಲ್ಯರನ್ನು ತುಂಬಾ ಕ್ಷೇಮವಾಗಿ ವಾಗ್ದತ್ತ ದೇಶಕ್ಕೆ ಕೈಹಿಡಿದು ನಡೆಸಿಕೊಂಡು ಹೋದನು. ಕಾಲದಿಂದ ಕಾಲಕ್ಕೆ, ಕರ್ತನಾದ ದೇವರು, ಇಸ್ರಾಯೇಲ್ಯರಿಗೆ ಆಜ್ಞೆಗಳಿಗೆ ವಿಧೇಯರಾಗಿ ನಡೆದುಕೊಂಡರೆ ಏಳಿಗೆಯಾಗುವಿರಿ ಎಂದು ಹೇಳಿದ್ದನು.

2 ಪೂ.ಕಾ.ವೃ 31:20,21ನ್ನು ಓದಿಕೊಳ್ಳಿರಿ. ಈ ವೇದಭಾಗದಲ್ಲಿ ಹಿಜ್ಕೀಯನ ಏಳಿಗೆಗೆ ಕೊಟ್ಟಿರುವ ಮುಖ್ಯವಾದ ಕಾರಣಗಳಾವುವು?

ಶಿಕ್ಷಣದ ಯಾವ ರಂಗವಾದರೂ ಸರಿ, ನಾವು ವಿಧೇಯತೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಬೇಕು. ನಮ್ಮ ವಿದ್ಯಾರ್ಥಿಗಳೋ ಮೂರ್ಖರಲ್ಲ. ಕೆಲವರಾದರೂ ಪ್ರಾಮಾಣಿಕರೂ, ಪ್ರೀತಿಪಾತ್ರರೂ ಮತ್ತು ವಿಧೇಯರೂ ಇದ್ದಾರೆ ಎಂಬುದನ್ನು ಶೀಘ್ರದಲ್ಲಿ ಇಲ್ಲವೇ ತದನಂತರ ಖಂಡಿತ ಗಮನಿಸುವರು. ಆದರೇನು? ಅವರ ಮೇಲೆಯೂ ವಿಪತ್ತುಗಳು ದಾಳಿಮಾಡುತ್ತವೆ. ಇದನ್ನು ನಾವು ವಿವರಿಸುವುದು ಹೇಗೆ?

ಸತ್ಯಾಂಶವೇನೆಂದರೆ: ವಿವರಿಸಲು ನಮ್ಮಿಂದಾಗದು. ನಾವು ಒಂದು ಪಾಪಮಯ, ದುಷ್ಟತ್ವದ ಪ್ರಪಂಚದಲ್ಲಿ ಜೀವಿಸುತ್ತಿದ್ದೇವೆ. ಮಹಾ ಹೋರಾಟ ನಡೆಯುತ್ತಿರುವ ಪ್ರಪಂಚದಲ್ಲಿ ನಾವಿದ್ದೇವೆ. ನಮ್ಮಲ್ಲಿ ಯಾರಿಗೂ ಅದರಿಂದ ವಿನಾಯಿತಿಯೂ ಇಲ್ಲ.

**ಮೇಲಿನ ಕಷ್ಟಕರವಾದ ಪ್ರಶ್ನೆಗಳಿಗೆ ಈ ಕೆಳಗಿನ ವಾಕ್ಯಗಳು ಬೋಧಿಸುವುದೇನು?** ಮಾರ್ಕ 6:25–27; ಯೋಬ 1,2; 2 ಕೊರಿಂಥ 11:23–29.

ಒಳ್ಳೇಯವರು ಮತ್ತು ಪ್ರಾಮಾಣಿಕ ಜನರು, ಆಜ್ಞೆ ಕೈಗೊಳ್ಳುವ ಜನರು ಯಾವಾಗಲೂ ಏಳಿಗೆಯಾಗಿಲ್ಲ ಎಂಬ ಅಂಶ ಪ್ರಶ್ನಾತೀತ. ಪ್ರಪಂಚ ಏಳಿಗೆಯನ್ನು ಕುರಿತು ಚೆನ್ನಾಗಿಯೇ ಅರ್ಥಮಾಡಿಕೊಂಡಿದೆ. ಕಷ್ಟಕರವಾದ ಪ್ರಶ್ನೆಗಳಿಗೆ ಇಲ್ಲಿರುವುದು ಭಾಗಶಃ ಉತ್ತರವಷ್ಟೇ. ದೇವರಾಜ್ಞೆ ಕೈಗೊಳ್ಳುವಿಕೆಯ ಪ್ರಾಮುಖ್ಯತೆಯನ್ನು ಬೋಧಿಸುತ್ತಿದ್ದಂತೆಯೇ, ಅನೇಕ ಪ್ರಶ್ನೆಗಳು ಏಳುವುದರಲ್ಲಿ ಯಾವ ಸಂದೇಹವೂ ಇಲ್ಲ. "ಏಳಿಗೆ" ಎಂಬುದರ ನಿಜವಾದ ಅರ್ಥವಾದರೂ ಏನು? ಕೀರ್ತನೆಗಾರನು ಹೇಳಿದ್ದೇನು?" **"ನಿನ್ನ ಆಲಯದ ಅಂಗಳಗಳಲ್ಲಿ ಕಳೆದ ಒಂದು ದಿನವು ಬೇರೆ ಸಹಸ್ರದಿನಗಳಿಗಿಂತ ಉತ್ತಮವಾಗಿದೆ. ದುಷ್ಟರ ಗುಡಾರಗಳಲ್ಲಿ**

**ವಾಸಿಸುವುದಕ್ಕಿಂತ ನನ್ನ ದೇವರ ಆಲಯದ ಬಾಗಿಲನ್ನು ಕಾಯ್ದುಕೊಂಡಿರುವುದೇ ಲೇಸು."** (ಕೀರ್ತನೆ 84:10). ಪ್ರಪಂಚದ ನಿರ್ದಿಷ್ಟಮಾನದಿಂದ ಅಳೆದು ನೋಡಿದರೂ, ದೇವರಿಗೆ ಪ್ರಾಮಾಣಿಕವಾಗಿ ನಡೆದುಕೊಳ್ಳುವುದು ಮತ್ತು ಆತನ ಆಜ್ಞೆಗಳಿಗೆ ವಿಧೇಯರಾಗಿರುವವರು, ಸದ್ಯಕ್ಕೆ "ಏಳಿಗೆ" ಹೊಂದರು. ಈ ವಿಷಯದಲ್ಲಿ ಕೇಳುವಂತಹ ಪ್ರಶ್ನೆ ಯಾವುದೂ ಇಲ್ಲ. ಇದ್ದದ್ದನ್ನು ಇದ್ದಂತೆ ಹೇಳದಿದ್ದರೆ, ನಾವು ವಿದ್ಯಾರ್ಥಿಗಳಿಗೆ ಅಪಕಾರ ಮಾಡಿದಂತಾಗುತ್ತದೆ.

**ಇಬ್ರಿಯ 11:13–16ನ್ನು ಓದಿಕೊಳ್ಳಿರಿ. ಪ್ರಾಮಾಣಿಕರಾದವರು ಸಹ ಇನ್ನೂ ತಮ್ಮ ಜೀವನದಲ್ಲಿ ಸಂಕಟಪಡುತ್ತಿರುವುದೇಕೆ ಎಂಬ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಈ ವಾಕ್ಯಗಳು ಹೇಗೆ ಸಹಾಯ ಮಾಡಬಲ್ಲವು?**

**ಗುರುವಾರ** **ಅಕ್ಟೋಬರ್ 15**

## ಯೇಸುಕ್ರಿಸ್ತನೇ, ನಮ್ಮ ಮಾದರಿ

ತಂದೆಯಾದ ದೇವರಿಗೆ ಪರಿಪೂರ್ಣ ವಿಧೇಯತೆ ತೋರಿದ ಮಾನವ ಒಬ್ಬನೇ ಒಬ್ಬನು. ಆತನೇ : ದೇವಕುಮಾರನಾದ ಯೇಸು ಕ್ರಿಸ್ತನು ನರಾವತಾರದಲ್ಲಿ ಈ ಧರೆಗಿಳಿದು ಬಂದು, ಭೂಮಿಯಲ್ಲಿ ಮಾನವನಂತೆ ಜೀವಿಸಿ ಹೋದನು. ದೇವರಾಜ್ಞೆಗೂ ಪರಿಪೂರ್ಣ ವಿಧೇಯನಾಗಿದ್ದನು. ನಮ್ಮ ಪಾಪಗಳಿಗೆ, ನಮಗಾಗಬೇಕಿದ್ದ ಶಿಕ್ಷೆಯನ್ನು ತನ್ನ ಮೇಲೆ ಬರಮಾಡಿಕೊಂಡ ಯೇಸುಕ್ರಿಸ್ತನು ನಮ್ಮ ಸ್ಥಳದಲ್ಲಿ ನಮಗೆ "ಬದಲಾಗಿ" ಬಂದವನು ಮಾತ್ರವಲ್ಲ, ಈ ಲೋಕದಲ್ಲಿ ಮಾನವನೊಬ್ಬ ಹೇಗೆ ಜೀವಿಸಬೇಕು ಎಂಬುದಕ್ಕೆ, ಆತನೇ ನಮ್ಮ "ಮಾದರಿ" ಸಹ ಆಗಿದ್ದಾನೆ.

**ಈ ವಾಕ್ಯಗಳನ್ನು ಓದಿಕೊಳ್ಳಿ: ಲೂಕ 2:51,52; ಫಿಲಿಪ್ಪಿ 2:8; ಇಬ್ರಿ 5:8; ಯೋಹಾನ 8:28,29. ತನ್ನ ಜೀವನದುದ್ದಕ್ಕೂ ಕ್ರಿಸ್ತನು ವಿಧೇಯತೆಯಿಂದ ನಡೆದುಕೊಂಡನು ಎಂಬುದನ್ನು ಈ ಮೇಲಿನ ವಾಕ್ಯಗಳು ನಮಗೆ ನೆನಪಿಸುವುದು ಹೇಗೆ?**

ಬಹುಶಃ ಈ ವಾಕ್ಯವನ್ನು ಯೋಹಾನ ಬರೆದಾಗ, ಈ ವಾಕ್ಯವನ್ನು ಬಹಳ ಉತ್ತಮವಾಗಿ ಅಭಿವ್ಯಕ್ತಿ ಪಡಿಸಿರಬೇಕು– "**ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವುದಕ್ಕೆ ಬದ್ಧನಾಗಿದ್ದಾನೆ**" (1 ಯೋಹಾನ 2:6). ನಾವು ನಮ್ಮ ಕಣ್ಣುಗಳನ್ನು ಕ್ರಿಸ್ತ ಯೇಸುವಿನ ಜೀವನ ಮತ್ತು ಈ ಭೂಮಿಯ ಮೇಲೆ ಆತನ ಸೇವೆಯ ಕಡೆ ನೆಟ್ಟಾಗ, ಆತ ತನ್ನ ಪರಲೋಕದ ತಂದೆಯನ್ನು ವಿಧೇಯತೆಯ ಮೂಲಕ ಅದ್ಹೇಗೆ ಮೆಚ್ಚಿಸಿದನು ಎಂಬುದನ್ನು ಸುಲಭವಾಗಿ ನೋಡಬಹುದು. ಕ್ರಿಸ್ತನು ಪ್ರವಾದನೆಯನ್ನು ನೆರವೇರಿಸಿದ್ದನು. ಆತನಾದರೋ ತನ್ನ ಜೀವನದುದ್ದಕ್ಕೂ ದೇವರ ಧರ್ಮಶಾಸ್ತ್ರವನ್ನೇ ಎತ್ತಿಹಿಡಿದಿದ್ದನು.

ದೇವರು, ಮೋಶೆಗೆ ತನ್ನ ಧರ್ಮಶಾಸ್ತ್ರವನ್ನು ಬರೆಯಬೇಕೆಂದು ಹೇಳಿದ್ದನು. ಅದೇ ಮುಂದೆ ಇಸ್ರಾಯೇಲ್ಯರಿಗೆ ಸಾಕ್ಷಿಯಾಗಿ ನಿಂತಿತು. ತನ್ನ ಅಪೋಸ್ತಲರಿಗೆ, ಶಿಷ್ಯರುಗಳಿಗೆ, ಪಾಪಿಗಳಿಗೆ ಮತ್ತು ಸಂತರಿಗೆ ಕ್ರಿಸ್ತನು ಜೀವಂತ ಭಾವನೆಗಳ ಸಾಕ್ಷಿಯಾಗಿದ್ದನು. ಈಗ, ನಮಗೆ ಒಂದಷ್ಟು ನಿಯಮಗಳ ಪರಿಪಾಲನೆಗಳ ಬದಲು, ರಕ್ತ–ಮಾಂಸಧಾರಿಯಾದ ಮಾನವನಾದ ಯೇಸುಸ್ವಾಮಿಯೇ ನಾವು ಅನುಕರಣೆ ಮಾಡಲು ಮಾದರಿಯಾಗಿದ್ದಾನೆ.

ಕ್ರಿಸ್ತ ಯೇಸುವಿನ ಮೇಲೆ ನಂಬಿಕೆಯಿಟ್ಟರೆ, ದೇವರಿಗೆ ವಿಧೇಯತೆಯಿಂದ ನಡೆದುಕೊಳ್ಳಬೇಕು ಎಂಬ ನಿಯಮದಿಂದ ನಮಗೆ ಬಿಡುಗಡೆಯಾಗುತ್ತದೆ ಎಂಬುದು, ಕ್ರಿಸ್ತನ ಮೇಲಿನ ನಂಬಿಕೆಯಲ್ಲ. ಅದು ಬರೀ ಊಹೆಯಷ್ಟೇ. "**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ**". ಆದರೆ, "**ಹಾಗೆಯೇ, ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು.**" ಎಫೆಸ 2:8; ಯಾಕೋಬ 2:17. ಯೇಸುಸ್ವಾಮಿ, ಪರಲೋಕದಿಂದ ಭೂಲೋಕಕ್ಕೆ ಇಳಿದು ಬರುವ ಮುನ್ನವೇ, ಈ ರೀತಿಯಾಗಿ ಹೇಳಿದ್ದನು– "**ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ ಅಂದೆನು**" ಕೀ 40:8. ಪರಲೋಕಕ್ಕೆ ಏರಿಹೋಗುವ ಮುನ್ನ, ಯೇಸುಸ್ವಾಮಿ– "**ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ....**" (ಯೋಹಾನ 15:10)

ಎಂದು ಪ್ರಕಟಿಸಿದ್ದನು. ಧರ್ಮಶಾಸ್ತ್ರವು– "**ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳುಕೊಳ್ಳುತ್ತೇವೆ**" ಎಂದು ಹೇಳಿದೆ (1 ಯೋಹಾನ 2:3). ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು, ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವುದಕ್ಕೆ ಬದ್ಧನಾಗಿದ್ದಾನೆ (1 ಯೋಹಾನ 2:6) – ಎಲೆನ್ ಜಿ ವೈಟ್, ಸ್ಟೆಪ್ಸ್ ಟು ಕ್ರೈಸ್ಟ್, ಪುಟ 61.

**ಕ್ರಿಸ್ತನ ಮಾದರಿಯನ್ನು ಅನುಸರಿಸಿ, ನಿಮ್ಮ ಜೀವನದ ಎಲ್ಲಾ ರಂಗಗಳನ್ನು ಹೇಗೆ ಉತ್ತಮ ಪಡಿಸಿಕೊಳ್ಳುವಿರಿ. ಮತ್ತು ಅದೇ ಸಮಯದಲ್ಲಿ ಇತರರಿಗೆ ಹೇಗೆ ಉತ್ತಮ ಶಿಕ್ಷಕರಾಗುವಿರಿ? ನಾವು ಮಾತನಾಡುವುದಕ್ಕಿಂತ, ನಮ್ಮ ನಡೆ ಹೆಚ್ಚು ಸದ್ದು ಮಾಡುತ್ತಿದೆಯಂತೆ, ಏಕೆ?**

**ಶುಕ್ರವಾರ** **ಅಕ್ಟೋಬರ್ 16**

**ಹೆಚ್ಚಿನ ಚಿಂತನೆಗಾಗಿ:** ಸೃಷ್ಟಿ ಮತ್ತು ವಿಮೋಚನೆಯ ಅಡಿಪಾಯವೇ ಪ್ರೀತಿ. ಅದೇ ಪ್ರೀತಿ ಶಿಕ್ಷಣದ ಅಡಿಪಾಯವೂ ಹೌದು. ಧರ್ಮಶಾಸ್ತ್ರದಲ್ಲಿ ಇದನ್ನು ಬಹಳ ಸರಳವಾಗಿ ಹೇಳಲಾಗಿದೆ. ನಮ್ಮ ಜೀವನಕ್ಕೆ ಮಾರ್ಗದರ್ಶಿಯಾಗಿ ದೇವರು ತನ್ನ ಧರ್ಮಪ್ರಮಾಣವನ್ನು ಕೊಟ್ಟಿರುವನು. ಮೊಟ್ಟ ಮೊದಲ ಮತ್ತು ಘನವಾದ ಆಜ್ಞೆ– "**ನಿಮ್ಮ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಶಕ್ತಿಯಿಂದಲೂ ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು**" ಲೂಕ 10:27. ಸರ್ವಶಕ್ತನೂ, ಸರ್ವಜ್ಞಾನಿಯೂ ಮತ್ತು ಸರ್ವಾಂತರಯಾಮಿಯು ಆದವನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣಶಕ್ತಿಯಿಂದಲೂ ಮತ್ತು ಪೂರ್ಣಬುದ್ಧಿಯಿಂದಲೂ ಪ್ರೀತಿಸುವುದೆಂದರೆ: ಪ್ರತಿಶಕ್ತಿಯ ಉನ್ನತ ಬೆಳವಣಿಗೆ, ಅಂದರೆ: ಇಡೀ ಜೀವದ– ದೇಹ, ಮನಸ್ಸು ಮತ್ತು ಆತ್ಮದಲ್ಲಿ ದೇವರ ಸ್ವರೂಪವನ್ನು ಪುನಃಸ್ಥಾಪನೆ ಮಾಡುವುದು.

ಮೊದಲ ಆಜ್ಞೆಯಂತೆಯೇ, ಎರಡನೇ ಆಜ್ಞೆಯು ಈ ರೀತಿ ಹೇಳುತ್ತದೆ: "**ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು**" ಮತ್ತಾ 22:39. ಪ್ರೀತಿಯ

ಆಜ್ಞೆ, ದೇಹ, ಮನಸ್ಸು ಮತ್ತು ಆತ್ಮ, ದೇವರ ಮತ್ತು ನೆರೆಯವರ ಸೇವೆ ಮಾಡಲು ಕರೆ ನೀಡಿದೆ. ಈ ಸೇವೆ, ನಮ್ಮನ್ನು ಬೇರೆಯುವರಿಗೆ ಆಶೀರ್ವಾದವಾಗಿರುವಂತೆ ಮಾಡುವುದು ಮಾತ್ರವಲ್ಲದೆ, ನಮಗೂ ದೊಡ್ಡ ಆಶೀರ್ವಾದವನ್ನು ತರುವಂತಿದೆ. ಎಲ್ಲಾ ಸತ್ಯವಾದ ಬೆಳವಣಿಗೆಗಳಲ್ಲಿ ನಿಸ್ವಾರ್ಥತೆ ಅಡಕವಾಗಿದೆ. ನಿಸ್ವಾರ್ಥ ಸೇವೆಯಿಂದ ಪ್ರತಿರಂಗದ ಉನ್ನತ ಸಂಸ್ಕೃತಿಯನ್ನು ನಾವು ಸ್ವೀಕಾರ ಮಾಡಿಕೊಳ್ಳುತ್ತೇವೆ. ಹೆಚ್ಚು ಹೆಚ್ಚು ನಾವು ದೈವಿಕ ಸ್ವರೂಪವನ್ನು ನಮ್ಮದಾಗಿಸಿಕೊಳ್ಳುತ್ತೇವೆ. ಪರಲೋಕವನ್ನು ನಮ್ಮ ಹೃದಯದಲ್ಲಿ ಸ್ವೀಕಾರ ಮಾಡಿಕೊಂಡು ಬಿಟ್ಟರೆ, ನಾವು ಪರಲೋಕಕ್ಕೆ ಅರ್ಹರಾಗಿಬಿಡುತ್ತೇವೆ"– ಎಲೆನ್ ಜಿ ವೈಟ್, ಎಜುಕೇಷನ್, ಪುಟ 16.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪುರಾತನ ಇಸ್ರಾಯೇಲ್ಯರ ಹಾಗೆ, ನಾವು ದೇವರನ್ನು ಪ್ರೀತಿಸಬೇಕು ಮತ್ತು ಅದೇ ಸಮಯದಲ್ಲಿ ದೇವರಿಗೆ ಭಯಪಡಬೇಕು ಸಹ (ಮತ್ತಾಯ 22:37, ಪ್ರಕ 14:7). ಈ ಎರಡನ್ನೂ ಒಮ್ಮೆಗೆ ಮಾಡುವುದು ಹೇಗೆ? ಇದರ ಜೊತೆಗೆ ಈ ಪ್ರಶ್ನೆಗೂ ಉತ್ತರಿಸಿರಿ: ಈ ಎರಡೂ ಆಜ್ಞೆಗಳು ಒಂದಕ್ಕೊಂದು ಘರ್ಷಿಸಿಕೊಳ್ಳುವದಿಲ್ಲವೇಕೆ?

2. ಒಂದು ಪ್ರಮಾಣವನ್ನು ಮೇಲಿನ ಪ್ರಶ್ನೆಗಳನ್ನು ತರಗತಿಯಲ್ಲಿ ಚರ್ಚಿಸಿ ಜೋಡಿಸುವುದು ಮತ್ತು ಒಂದು ನಿಯಮವನ್ನು ಹುಟ್ಟು ಹಾಕುವುದಕ್ಕೂ ಇರುವ ವ್ಯತ್ಯಾಸವೇನು? ನಿಮ್ಮ ಅನುಭವದಲ್ಲಿ, ಅಡ್ವೆಂಟಿಸ್ಟರುಗಳು ತಮ್ಮ ವಿಶ್ವಾಸಿಗಳ ಸಮುದಾಯದಲ್ಲಿ ಉನ್ನತ ಪ್ರಮಾಣಗಳ ರೂಪಿಸುವುದರಲ್ಲಿ ಹೆಚ್ಚು ಕಾಳಜಿ ವಹಿಸುತ್ತಾರೋ ಅಥವಾ ಸಮುದಾಯುಗಳನ್ನು ಒಟ್ಟುಗೂಡಿಸುವ ನಿಯಮಗಳನ್ನು ರೂಪಿಸುವುದರಲ್ಲಿ ಹೆಚ್ಚು ಕಾಳಜಿ ವಹಿಸುತ್ತಾರೋ? ನಿಯಮಗಳನ್ನು ಒಬ್ಬ ವ್ಯಕ್ತಿಗೆ, ಒಂದು ಕುಟುಂಬಕ್ಕೆ, ಒಂದು ಸಭೆಗೆ ಹುಟ್ಟುಹಾಕುವ ವಿಷಯದಲ್ಲಿ ಧರ್ಮಶಾಸ್ತ್ರವು ಹೇಳುವುದೇನು?

3. ದೇವರಾಜ್ಞೆಗೆ ವಿಧೇಯತೆಯ ಪ್ರಾಮುಖ್ಯತೆ ಮತ್ತು ಇಂತಹ ವಿಧೇಯತೆ ರಕ್ಷಣೆಯ ಮೂಲವಲ್ಲ ಎಂಬ ಈ ಎರಡು ಅಂಶಗಳ ನಡುವೆ ಸಮತೋಲನವನ್ನು ಕಾಯುವುದು ಹೇಗೆ?

4. ಕೀರ್ತನೆ 119ನ್ನು ಓದಿರಿ. ಇಲ್ಲಿ ಅದೆಷ್ಟು ಸಲ ವಿಧೇಯತೆ, ಸ್ವಾತಂತ್ರ್ಯ, ಆಜ್ಞೆಗಳು, ನಿಯಮಗಳು ಮತ್ತು ದೇವರ ಆದೇಶಗಳು ಉಲ್ಲೇಖಿಸಲ್ಪಟ್ಟಿವೆ ಎಂಬುದನ್ನು ಲೆಖ್ಖ ಹಾಕಿರಿ. ಈ ಅಂಶಗಳನ್ನು ಕುರಿತು ಕೀರ್ತನೆ 119ರ ಬರಹಗಾರ ನಮಗೆ ಹೇಳಬಯಸುವುದೇನು?